220 (625) : ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಅಸಮರ್ಪಕ ಬಸ್ ಸೇವೆಯಿಂದಾಗಿ ಸಾರ್ವಜನಿಕ ಪ್ರಯಾಣಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸಮರ್ಪಕ ಬಸ್ ಸೇವೆಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ;

ಇ) ವಿರಾಜಪೇಟೆ ತಾಲ್ಲೂಕಿನಲ್ಲಿ ಸಂಚರಿಸುತ್ತಿರುವ ಬಸ್ ಮಾರ್ಗಗಳ ಸಂಖ್ಯೆ ಎಷ್ಟು;

ಈ) ಬೆಂಗಳೂರು ವಿರಾಜಪೇಟೆಗೆ ವೋಲ್ವೋ ಬಸ್ ಸಂಚರಿಸುವಂತೆ ಬೇಡಿಕೆ ಇರುವುದು ನಿಜವೇ;

ಉ) ಇದ್ದಲ್ಲಿ, ವೋಲ್ವೋ ಬಸ್ ಸಂಚಾರ ವ್ಯವಸ್ಥೆ ಕಲ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು ಹಾಗೂ ಯಾವಾಗ ಕಾರ್ಯಾಚರಣೆಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ವಿರಾಜಪೇಟೆ ಮುಖೇನ ವಿವಿಧ ಪ್ರದೇಶಗಳಿಗೆ ಒಟ್ಟು 75 ಸಾರಿಗೆಗಳನ್ನು ಪ್ರಸ್ತುತ ಕಾರ್ಯಾಚರಣೆಗೊಳಿಸಲಾಗುತ್ತಿದೆ.

ಈ) ಹೌದು.

ಉ) ರಸ್ತೆಯು ವೋಲ್ವೋ ಸಾರಿಗೆಯ ಕಾರ್ಯಾಚರಣೆಗೆ ಸೂಕ್ತವಾಗಿಲ್ಲದ ಕಾರಣ, ಕಾರ್ಯಾಚರಣೆಗೊಳಿಸುವುದು ಸಾಧ್ಯವಿಲ್ಲ.

221 (940) : ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆ, ವಿರಾಜಪೇಟೆಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಬಯಲು ರಂಗಮಂದಿರಗಳು ಯಾವುವು;

ಆ) ಹೊಸದಾಗಿ ಎಲ್ಲೆಲ್ಲಿ ರಂಗಮಂದಿರಗಳನ್ನು ಮಂಜೂರು ಮಾಡಲು ಸ್ಥಳಗಳನ್ನು ಗುರುತಿಸಲಾಗಿದೆ.

ಇ) ಹಾಲಿ ಇರುವ ರಂಗಮಂದಿರಗಳ ಸಂಖ್ಯೆ ಎಷ್ಟು? ಹಾಗೂ ಇವುಗಳಿಗೆ ಒದಗಿಸಿರುವ ಹಣ ಎಷ್ಟು;

ಈ) ಈಗ ಮಂಜೂರಾಗಿರುವ ಬಯಲು ರಂಗಮಂದಿರಗಳನ್ನು ಯಾವಾಗ ಪ್ರಾರಂಭಿಸಲಾಗುವುದು.

ಉ) ವಿರಾಜಪೇಟೆಯಲ್ಲಿ ರಂಗ ಮಂದಿರ ನಿರ್ಮಾಣಗೊಂಡಿದೆಯೇ;

ಊ) ಈಗ ಇದು ಯಾವ ಹಂತದಲ್ಲಿದೆ. ಯಾವಾಗ ಮುಗಿಸಲಾಗುವುದು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಕೊಡಗು ಜಿಲ್ಲೆಯ ವಿರಾಜಪೇಟೆಯ ಮಂಡಲ ಪಂಚಾಯಿತಿಯವರಿಗೆ ಬಯಲು ರಂಗಮಂದಿರದ ನಿರ್ಮಾಣಕ್ಕಾಗಿ ಐವತ್ತು ಸಾವಿರ ರೂಗಳ ಅನುದಾನವನ್ನು ನೀಡಿದ್ದು, ಬಯಲು ರಂಗಮಂದಿರವು ಈಗಾಗಲೇ ಪೂರ್ಣಗೊಂಡಿದೆ.

ಆ) ಬಯಲು ರಂಗಮಂದಿರಗಳಿಗಾಗಿ ಸ್ಥಳಗಳನ್ನು ಇಲಾಖೆಯು ಗುರುತಿಸುವುದಿಲ್ಲ. ಆದರೆ ಬೇಡಿಕೆಗಳಿಗನುಸಾರವಾಗಿ ಪರಿಶೀಲಿಸಲಾಗುವುದು.

ಇ) ಒಟ್ಟು ಈವರೆಗೂ ರಾಜ್ಯದಲ್ಲಿ 253 ಬಯಲು ರಂಗಮಂದಿರಗಳಿಗೆ ಮಂಜೂರಾತಿ ನೀಡಿದ್ದು ಇವುಗಳಲ್ಲಿ 164 ಬಯಲು ರಂಗಮಂದಿರಗಳು ಪೂರ್ಣಗೊಂಡಿವೆ ಉಳಿದ 89 ಬಯಲು ರಂಗಮಂದಿರಗಳು ವಿವಿಧ ಹಂತದಲ್ಲಿವೆ ಇವುಗಳ ನಿರ್ಮಾಣಕ್ಕಾಗಿ ಇದುವರೆಗೆ ನೀಡಿದ ಒಟ್ಟು ಮೊತ್ತ 1,76,17,750–00 ರೂಗಳು.

ಈ) ಈಗಾಗಲೇ ಆರಂಭಗೊಂಡಿದ್ದು ಹಂತ ಹಂತವಾಗಿ ಪೂರ್ಣಗೊಳಿಸಲಾಗುವುದು.

ಉ) ಈಗಾಗಲೇ ಕ್ರಮ ಸಂಖ್ಯೆ 1 ರಲ್ಲಿ ಹೇಳಿರುವಂತೆ ರಂಗಮಂದಿರವು ನಿರ್ಮಾಣ ಗೊಂಡಿದೆ.

ಊ) ಉದ್ಭವಿಸುವುದಿಲ್ಲ.

222 (625) : ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿರಾಜಪೇಟೆ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಬೇತ್ರಿ ಯೋಜನೆಯ ಪೈಪ್ ಜೋಡಣೆ ಕಾಮಗಾರಿ ಕೆಲಸ ಈಗ ಯಾವ ಂತದಲ್ಲಿದೆ;

ಆ) ಇದಕ್ಕಾಗಿ ಜಲಾಗಾರ ಸಂಗ್ರಹದ ನಿರ್ಮಾಣ ಹಾಗೂ ವಿದ್ಯುತ್ ಸೌಲಭ್ಯವನ್ನು ಕಲ್ಪಿಸಲಾಗಿದೆಯೇ;

ಇ) ಈ ಸೌಲಭ್ಯಗಳು ಇಲ್ಲದಿರುವುದರಿಂದ ಈಗಲೂ ಸಹ ಸಮರ್ಪಕ ನೀರು ದೊರೆಯದೆ ಕುಡಿಯುವ ನೀರಿನ ತೊಂದರೆಯಾಗಿರುವುದು ನಿಜವೇ;

ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ;

ಉ) ನಿಗಧಿಪಡಿಸಿರುವ ಹಣದ ವಿವರ ಒದಗಿಸುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಈ ಯೋಜನೆಯಲ್ಲಿ ಮೂಲ ಅಂದಾಜಿನಲ್ಲಿದ್ದಂತೆ ಬೇತ್ರಿ ಮೂಲ ಸ್ಥಾವರದಿಂದ ಜಲಶುದ್ಧೀಕರಣ ಘಟಕದವರೆಗೆ 200 ಮಿ.ಮೀ. ವ್ಯಾಸದ ಡಿ.ಐ. ಏರು ಕೊಳವೆ ಮಾರ್ಗವನ್ನು ಅಳವಡಿಸಿ ಹಾಲಿ ಇರುವ 200 ಮಿ.ಮೀ. ವ್ಯಾಸದ ಸಿ.ಐ. ಕೊಳವೆ ಮಾರ್ಗಕ್ಕೆ ಜೋಡಿಸಿ ಕಾಮಗಾರಿ ಪೂರ್ಣಗೊಳಿಸಲಾಗಿದೆ.

ಜಲಶುದ್ಧೀಕರಣ ಘಟಕದಿಂದ ಜಲಸಂಗ್ರಹಾಗಾರಗಳಿಗೆ 200 ಮಿ.ಮೀ. ವ್ಯಸದ ಡಿ.ಐ. ಕೊಳವೆಗಳನ್ನು ಹಾಗೂ 160 ಮಿ.ಮೀ. ವ್ಯಾಸದ ಪಿ.ವಿ.ಸಿ. ಕೊಳವೆಗಳನ್ನು ಅಳವಡಿಸಿ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಈ ಯೋಜನೆಯನ್ನು ಮಂಜೂರಾತಿಯಂತೆ ಪೂರ್ಣಗೊಳಿಸಿ ದಿ: 30.3.04 ರಂದು ಚಾಲನೆಗೊಳಿಸಲಾಗಿದೆ.